# ಕಲ್ಪನಾಳಂತಹ ಅತ್ತೆ ಬೇಕಂತೆ!



**ಸಂಗೀತಾ ಉದಯದ 'ಸೇವಂತಿ'ಯ ಕಲ್ಪನಾ**

◆ **ಕೋವಿಡ್ ನಂತರದ ದಿನಗಳು ಹೇಗಿವೆ?**

ನಮ್ಮ ಕ್ಷೇತ್ರವನ್ನು ಕೋವಿಡ್ ತುಂಬಾ ಬಾಧಿಸಿದೆ. ನಮ್ಮ ಬಳಗದ ಯಾರಿಗೇ ಫೋನ್ ಮಾಡಿದರು ಅವರು ತಮ್ಮ ಸಂಕಷ್ಟವನ್ನು ಪ್ರಸ್ತಾಪಿಸುತ್ತಾರೆ. ಮೊದಲಿನಂತೆ ಜನ ಖುಷಿಯಾಗಿಲ್ಲ. ಮನೋಸ್ಥಿತಿಯೇ ಕಳಾಹೀನವಾಗಿದೆ. ಮೊದಲೆಲ್ಲ ಹಬ್ಬ–ಹರಿದಿನಗಳು ಬಂದರೆ ಆಚರಣೆ–ಸಂಭ್ರಮದ ಬಗ್ಗೆ ಮಾತನಾಡುತ್ತಿದ್ದೆವು. ಈಗ ಆ ಎಲ್ಲದಕ್ಕಿಂತ ಕೆಲಸವೇ ಮುಖ್ಯ ಎನ್ನುವಂತೆ ಆಗಿದೆ. ಅದರ ಜೊತೆ ಸಂಭಾವನೆ ಬಗ್ಗೆ ಮಾತನಾಡುವುದಕ್ಕೂ ಹಿಂದೆಮುಂದೆ ನೋಡಬೇಕಾದ ಪರಿಸ್ಥಿತಿ ಇದೆ. ಆರ್ಥಿಕ ಪರಿಸ್ಥಿತಿ ಆತ್ಮವಿಶ್ವಾಸವನ್ನೇ ಕುಗ್ಗಿಸಿದೆ.

◆ **'ಸೇವಂತಿ'ಯ ಕಲ್ಪನಾ ಪಾತ್ರದ ಆಳ–ಅಗಲ ಹೇಗಿದೆ?**

ಇದು ಟೈಟಲ್ ಪಾತ್ರ ಅಲ್ಲ. ಆದರೂ ಇದು ಮುಖ್ಯ ಅನ್ನಿಸುತ್ತದೆ. ವಾಸ್ತವಿಕತೆಯನ್ನು ಮರೆತು ಉತ್ಪ್ರೇಕ್ಷೆಯನ್ನು ಬಿಂಬಿಸುವುದಿಲ್ಲ. ಇದರಲ್ಲಿ ಭಾವುಕ ಕ್ಷಣದಷ್ಟೇ ಕಾಮಿಡಿ ಕೂಡಿದೆ. ಕಥೆಗೆ ಪಿಲ್ಲರ್ ರೀತಿ ಇದೆ. ಇದರಲ್ಲಿ ಅತ್ತೆ ಆಗಿದ್ದೇನೆ. ಸೊಸೆ ಆಗಿದ್ದೇನೆ. ಅಮ್ಮನೂ ಆಗಿದ್ದನೆ. ಇನ್ನೇನು ಕೆಲವೇ ದಿನಗಳಲ್ಲಿ ಸಾವಿರ ಕಂತು ತಲುಪುತ್ತದೆ. ವೀಕ್ಷಕರು ಕೆಲವೊಮ್ಮೆ 'ಕಲ್ಪನಾ ರೀತಿ ಅತ್ತೆ ಬೇಕು, ಕಲ್ಪನಾ ರೀತಿ ಅಮ್ಮ ಬೇಕು' ಎಂದು ನನ್ನನ್ನೇ ಕೇಳಿದ್ದಿದೆ.

ಸೇವಂತಿಯ ನಿಮ್ಮ ಪಾತ್ರ ಚೆನ್ನಾಗಿದೆ ಕಲ್ಪನಾ ಮೇಡಂ ಅಂತಾರೆ. ಒಬ್ಬ ಹುಡುಗಿ 'ಆಶಾ ಮೇಡಂ ನಿಮ್ಮಂತಹ ಅತ್ತೆ ಬೇಕು ನನಗೆ' ಅಂದಿದ್ದರು. ಇದೆಲ್ಲ ಖುಷಿಯನ್ನು ಕೊಡುತ್ತದೆ. ಕೋವಿಡ್ ನಂತರವೂ ಈ ಧಾರಾವಾಹಿ ಓಡುತ್ತಿದೆ. ಇದರಲ್ಲಿ ತುಂಬ ಪಾತ್ರಗಳು ರಿ ಪ್ಲೇಸ್ ಆಗಿವೆ. ಜನರ ಮನಸ್ಸಿನಲ್ಲಿ ನನ್ನ ಪಾತ್ರ ಕೂತಿದೆ. ಈ ಪಾತ್ರ ತೃಪ್ತ ಭಾವನೆಯನ್ನು ತುಂಬಿದೆ.

◆ **ಮುಖ್ಯಪಾತ್ರ ಬಿಟ್ಟು, ಬಂದು ಹೋಗುವಂತಹ ಪಾತ್ರ ಮಾಡಬೇಕಾದರೆ.**

ಸಾಮಾನ್ಯವಾಗಿ ಸೀರಿಯಲ್‌ಗಳಲ್ಲಿ ಹಾಗೆ ಆಗುವುದಿಲ್ಲ. ಸಿನಿಮಾಗಳಲ್ಲಿ ಆಗುತ್ತಿರುತ್ತದೆ. ಐದು ಆರು ದಿನಗಳ ಕಾಲ ಚಿತ್ರೀಕರಣ ಇದೆ ಎಂದು ಒಂದೆರಡು ಗಂಟೆಗೆ ಮುಗಿಸಿ ಕಳಿಸಿದ್ದನ್ನು ಕೇಳಿದ್ದೇನೆ. ಅದೇನು ಪ್ರಶ್ನೆ ಮಾಡುವಂತದ್ದಲ್ಲ. ಆದರೆ, ಬೇಸರ ಆಗುತ್ತದೆ. ಅಂತಹ ಪಾತ್ರಗಳಿಗೆ ಇಂತಹವರೇ ಬೇಕು ಎಂದೇನೂ ಇರುವುದಿಲ್ಲ. ಒಂದೇ ದಿನ ಇದ್ದರೆ ಹಾಗೇ ಹೇಳಿ ಕರೆಯಬೇಕು. ಇಂತಹ ಹಲವು ಪ್ರಕರಣಗಳು ನಡೆಯುತ್ತವೆ. ಮನಸಿಗೆ ಹಚ್ಚಿಕೊಳ್ಳದೆ ಅದರಿಂದ ಬೇಗ ಹೊರಬರಬೇಕಾಗುತ್ತದೆ. ಅದು ನಮ್ಮ ಆರೋಗ್ಯದ ಮೇಲೆ ಹಾನಿಯನ್ನು ಉಂಟು ಮಾಡಬಾರದು ಎಂದೇ ಹೇಳುತ್ತೇನೆ. ಅದೇನೂ ಹೇಳಿಕೊಳ್ಳುವಂತಹದ್ದಲ್ಲ. ವೈಯಕ್ತಿಕವಾಗಿ ನನಗೆ ಅದ್ದೂರಿ ಸಿನಿಮಾಗಳಲ್ಲಿಯೂ ಒಳ್ಳೆಯ ಪಾತ್ರಗಳೂ ಸಿಕ್ಕಿವೆ. ಇದೇ ನಮ್ಮ ವೃತ್ತಿಯಾಗಿರುವುದರಿಂದ ಚಿಕ್ಕ ಪಾತ್ರ ಇದ್ದಾಗಲೂ ನಿಭಾಯಿಸಿಕೊಂಡು ಹೋಗಬೇಕು.

◆ **ಇತ್ತೀಚಿನ ದಿನಗಳಲ್ಲಿ ಅನುಭವಿ ಕಲಾವಿದರಿಗೆ ಅವಕಾಶ ಕಡಿಮೆ ಎನ್ನಲಾಗುತ್ತದೆ.**

ಹಿರಿಯ ಕಲಾವಿದರಿಗೂ ಆಡಿಷನ್ ಕರೆಯುತ್ತಾರೆ ಎನ್ನುವುದು ಮುಜುಗರ ಅನಿಸುತ್ತದೆ. 20 ವರ್ಷ ಅನುಭವ ಇರುವ ನಟರು ತಮ್ಮ ನೋವನ್ನು ಈ ಬಗ್ಗೆ ತೋಡಿಕೊಂಡಿದ್ದರು. 'ಸಂಗೀತಾ ಅದೇನೋ ಲುಕ್ ಟೆಸ್ಟ್ ಅಂತೆ, ಪಾತ್ರ ನನಗೇ ಖಚಿತವಾಗಿದೆಯಂತೆ ನೋಡಬೇಕು' ಎಂದು ಕರೆದಿದ್ದರಂತೆ. ಬೆಳಿಗ್ಗೆ 9 ಗಂಟೆ ಹೋಗಿದ್ದ ಅವರ ಸರತಿ ಬಂದಿದ್ದು ಇಳಿಹೊತ್ತು 4ಕ್ಕಂತೆ. ಆ ಪಾತ್ರಕ್ಕೆ ಬೇಕಾಗುವ ಗೆಟಪ್ ಹಾಕಿ ಡೈಲಾಗ್ ಕೊಟ್ಟಿದ್ದರಂತೆ. ನಾಳೆ ಹೇಳ್ತೀವಿ ಅಂದವರು, 15 ದಿನ ಕಳೆದರೂ ಫೋನ್ ಮಾಡಲಿಲ್ಲ. ವಿಚಾರಿಸಿದರೆ, ನಿಮ್ಮ ಪಾತ್ರಕ್ಕೆ ಬೇರೆಯವರನ್ನು ತೆಗೆದುಕೊಂಡಿದ್ದಾಗಿ ಹೇಳಿದ್ದರಂತೆ. 'ನ್ಯೂ ಫೇಸ್ ಬೇಕು' ಅಂದ್ರಂತೆ. ಇಂತಹ ಸಂದರ್ಭದಲ್ಲಿ ಕಲಾವಿದರು ಖಿನ್ನತೆಗೆ ತುತ್ತಾಗುವ ಅಪಾಯ ಇದೆ. ಹೊಸ ಕಲಾವಿದರ ಸಾಲಿನಲ್ಲಿ ಸೀನಿಯರ್ ನಟರೂ ಆಡಿಷನಿಗೆ ಬಂದರೆ ಹೇಗೆ ಇರುತ್ತದೆ?

ಇದೇ ರೀತಿಯ ಮತ್ತೊಂದು ಅನುಭವವನ್ನು ಒಬ್ಬ ನಟ ಕೂಡ ಹೇಳಿದ್ದರು. ಅದು ಕೇಳಿ ನನಗೂ ಬೇಜಾರಾಯ್ತು. ಆದರೆ ಇವತ್ತಿನ ಸಂದರ್ಭಕ್ಕೆ ಕಲಾವಿದರಾದ ನಾವೂ ಹೊಂದಿಕೊಳ್ಳಬೇಕು. ಒಮ್ಮೆ ನನಗೇ ಒಂದು ಕರೆ ಬಂದಿತ್ತು. ನಿಮ್ಮ ವಾಟ್ಸಾಪ್‌ಗೆ ಡೈಲಾಗ್ ಕಳಿಸಿದ್ದೇನೆ. ಅದನ್ನು ವಿಡಿಯೊ ಮಾಡಿ ಕಳಿಸಿ. ನಾನು ನಟನೆಯನ್ನು ಆರಂಭಿಸಿ 26 ವರ್ಷ ಆಗಿದೆ. ಒಂದಿಲ್ಲ ಒಂದು ಧಾರಾವಾಹಿಯಲ್ಲಿ ಪಾತ್ರ ಬರ್ತಾ ಇರುತ್ತದೆ. ಆದರೂ ಹೀಗೆ ಕೇಳುವುದು ಒಂದು ರೀತಿ ಕಿರಿಕಿರಿ ಆಗುತ್ತದೆ.

◆ **ಯಾವುದೇ ಪಾತ್ರವನ್ನು ಒಪ್ಪಬೇಕಾದರೆ ಅದರ ಹಿನ್ನೆಲೆಯನ್ನು ಹೇಗೆ ಗುರುತಿಸುತ್ತೀರಿ?**

ಪಾಸಿಟಿವ್ ಪಾತ್ರಗಳೇ ಆಗಬೇಕು. ಅಂತಹ ಪಾತ್ರಗಳು ಇದ್ದರೆ ಮಾತ್ರ ನನಗೆ ಪಸಂದ್ ಅನ್ನಿಸುತ್ತದೆ. 40 ವರ್ಷ ದಾಟಿದ ಮೇಲೆ ಸಾಮಾನ್ಯವಾಗಿ ನಾಯಕಿ ಪಾತ್ರ ಸಿಗುವುದಿಲ್ಲ. ಅದೂ ನನಗೆ ಗೊತ್ತಿದೆ. ಯಾವುದೇ ಪಾತ್ರ ಆದರೂ ಅದಕ್ಕೆ ಎಷ್ಟು ಪ್ರಾಮುಖ್ಯತೆ ಇದೆ ಎನ್ನುವುದನ್ನು ತಿಳಿದುಕೊಳ್ಳುತ್ತೇನೆ. ಎರಡೇ ಕಂತುಗಳಲ್ಲಿ ಬಂದರೂ ಅದಕ್ಕೆ ತೂಕ ಇರಬೇಕು. ಜನ ಗುರುತಿಸುವಂತೆ ಇರಬೇಕು. ಅಭಿನಯ ಮಾಡಲು ಅವಕಾಶ ಇರಬೇಕು. ಸಾದಾ ಸೀದ ಇದ್ದರೆ ಯಾವ ಪ್ರಯೋಜನವೂ ಇರುವುದಿಲ್ಲ.

■ **ರಾಘವೇಂದ್ರ ಕೆ.**